ದಿ:13/08/2025 (7)
156ನೇ ಪ್ರ ಸಂ-72 (

**ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಗೋ ವಿಂದರಾಜು (ವಿಧಾನ ಸಭಾ ಕ್ಷೇತ್ರ) ಇವರು ನಿಯಮ 72ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಕುರಿತು.**

**-:: ಗಮನ ಸೆಳೆಯುವ ಸೂಚನೆ ::-**

"ಕೋಲಾರ ನಗರಸಭೆ ವ್ಯಾಪ್ತಿಯಲ್ಲಿ ಸಂಗ್ರಹಿಸುತ್ತಿರುವ ತ್ಯಾಜ್ಯವನ್ನು ಅವೈಜ್ಞಾನಿಕ ಹಾಗೂ ಅನಧಿಕೃತವಾಗಿ ನಗರದ ಸುತ್ತಮುತ್ತ ಹಳ್ಳಿಗಳು, ಅರಣ್ಯ ಪ್ರದೇಶ ಕೆರೆ ಸುತ್ತಮುತ್ತಲಿನ ಪ್ರದೇಶ, ರಸ್ತೆ ಬದಿ, ರೈತರ ಜಮೀನು, ಬಯಲು ಪ್ರದೇಶಕ್ಕೆ ಕೊಂಡೊಯ್ದು ಎಸೆಯುತ್ತಿದ್ದಾರೆ. ವೈಜ್ಞಾನಿಕವಾಗಿ ಕಸವಿಲೇವಾರಿ ಮಾಡಲೆಂದೇ ಕೋಲಾರ ತಾಲ್ಲೂಕಿನ ಕೆಂದಟ್ಟಿಯಲ್ಲಿ 10 ಎಕರೆ ಪ್ರದೇಶದಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕ ನಿರ್ಮಿಸಲಾಗಿದೆ. ಆದರೆ 10 ಕಿ.ಮೀ. ದೂರದಲ್ಲಿದೆ. ಆದರೆ ಅಲ್ಲಿಗೆ ನಗರಸಭೆಯ ಕಸದ ವಾಹನಗಳು ಹೋಗುವುದೇ ಇಲ್ಲ. ಬದಲಾಗಿ ಸುತ್ತಲಿನ ಪ್ರದೇಶದ ಕೆರೆ, ಕಾಲುವೆ, ತಗ್ಗಿನ ಪ್ರದೇಶಕ್ಕೆ ತ್ಯಾಜ್ಯ ಸುರಿದು ಬಿಲ್ ಮಾಡುತ್ತಿದ್ದಾರೆ. ಈ ವಿಷಯವನ್ನು ಮಾನ್ಯ ಪೌರಾಡಳಿತ ಸಚಿವರ ಗಮನ ಸೆಳೆಯಲು ಬಯಸುತ್ತೇನೆ."

**-:: ಉತ್ತರ ::-**

ಕೋಲಾರ ನಗರಸಭೆಯ ಘನತ್ಯಾಜ್ಯ ನಿರ್ವಹಣೆಯ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ರೂ. 283.80 ಲಕ್ಷಗಳ ಮೊತ್ತದ ವಿಸ್ತೃತ ಯೋಜನಾ ವರದಿಯನ್ನು ಅನುಮೋದಿಸಿದ್ದು ಅದರಂತೆ, ಕಾಮಗಾರಿಗಳನ್ನುಅನುಷ್ಠಾನಗೊಳಿಸಲಾಗುತ್ತಿದೆ.

ಕೋಲಾರ ನಗರಸಭೆಯು ಸುಮಾರು 1.86 ಲಕ್ಷಗಳಷ್ಟು ಜನಸಂಖ್ಯೆ ಹೊಂದಿದ್ದು, ಒಟ್ಟು 35 ವಾರ್ಡ್‌ಗಳನ್ನು ಒಳಗೊಂಡಿರುತ್ತದೆ. ನಗರಸಭೆ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಸುಮಾರು 80 ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು. ನಗರಸಭೆಯಲ್ಲಿ ಪ್ರಸ್ತುತ 25 ಸಂಖ್ಯೆಯ ಆಟೋಟಿಪ್ಪರ್ ಗಳಿದ್ದು ಸದರಿ ವಾಹನಗಳಿಂದ ಮನೆ ಮನೆಯಲ್ಲಿ ಉತ್ಪತ್ತಿಯಾಗುತ್ತಿರುವ ವಿಂಗಡಿಸಿದ ತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಿಸಲಾಗುತ್ತಿದ್ದು, 07 ಸಂಖ್ಯೆ ಟ್ರಾಕ್ಟರ್ ಟ್ರೈಲರ್ ವಾಹನಗಳಿಂದ Black spot ಗಳಿಂದ ಮತ್ತು ವಾಣಿಜ್ಯ ಮಳಿಗೆಗಳಿಂದ ತ್ಯಾಜ್ಯವನ್ನು ಸಂಗ್ರಹಿಸಲಾಗುತ್ತಿದೆ. ನಗರಾದ್ಯಂತ ಆಟೋಟಿಪ್ಪರ್ ಮತ್ತು ಟ್ರಾಕ್ಟರ್ ಗಳಲ್ಲಿ ಸಂಗ್ರಹಣೆ ಮಾಡಿದ ತ್ಯಾಜ್ಯವನ್ನು ದ್ವಿತೀಯ ಹಂತದಲ್ಲಿ ನಗರದ ಲಾರಿ ಸ್ಟಾಂಡ್ ನಲ್ಲಿ 03 ಕಾಂಪ್ಯಾಕ್ಟರ್ ಗಳಿಗೆ ಲೋಡ್ ಮಾಡಿ ಘನತ್ಯಾಜ್ಯ ನಿರ್ವಹಣೆಗೆ ಮಂಜೂರಾಗಿರುವ ಕೆಂದಟ್ಟಿ ಗ್ರಾಮದ 10 ಎಕರ ಜಮೀನಿನಲ್ಲಿ ಸ್ವಚ್ಛ ಭಾರತ ಮಿಷನ್-1.0ರ ಯೋಜನೆಯಡಿ ಈಗಾಗಲೇ ನಿರ್ಮಾಣ ಮಾಡಿರುವ ಘನತ್ಯಾಜ್ಯ ನಿರ್ವಹಣಾ ಘಟಕಕ್ಕೆ ರವಾನಿಸಲಾಗುತ್ತಿದೆ.

ಪ್ರತಿನಿತ್ಯ ಸುಮಾರು 35 ಟನ್ (87.5%) ಹಸಿತ್ಯಾಜ್ಯವನ್ನು ಸಂಸ್ಕರಿಸಿ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನಲ್ಲಿ ಗೊಬ್ಬರದ ಗುಣಮಟ್ಟವನ್ನು ಪರೀಕ್ಷಿಸಿ ಕೋಲಾರ ಅಗ್ರಿಗೋಲ್ಡ್ ಬ್ರಾಂಡ್ ಹೆಸರಿನಲ್ಲಿ ಗೊಬ್ಬರವನ್ನು ಮಾರಾಟ ಮಾಡಲಾಗುತ್ತಿದೆ.

ಕೋಲಾರ ನಗರದ ಎಂ.ಜಿ ರಸ್ತೆಯ ನಗರಸಭೆ ವಾಣಿಜ್ಯ ಮಳಿಗೆಗಳ ಸಂಕೀರ್ಣದಲ್ಲಿ ದಿನಾಂಕ: 30-06-2025 ರಂದು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಗೊಬ್ಬರ ಮಾರಾಟ ಮಳಿಗೆಯನ್ನು ಉದ್ಘಾಟನೆ ಮಾಡಿ ಪ್ರಾರಂಭಿಸಿದ್ದು ಈವರೆಗೂ ಸುಮಾರು 20 ಟನ್ ಗಳಷ್ಟು ಗೊಬ್ಬರವನ್ನು ಮಾರಾಟ ಮಾಡಿ ರೂ.75,000/- ಗಳನ್ನು ನಗರಸಭೆಗೆ ಪಾವತಿಸಿಕೊಳ್ಳಲಾಗಿರುತ್ತದೆ.

ದಿನನಿತ್ಯ ಸುಮಾರು 07 ಟನ್ (21.87%) ಒಣ ತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ನಗರಸಭೆಯ ಮಣಿಘಟ್ಟ ರಸ್ತೆಯ ಬಳಿ ಹಾಗೂ ಕೆಂದಟ್ಟಿಯ ಒಣತ್ಯಾಜ್ಯ ಸಂಗ್ರಹಣಾ ಘಟಕದಲ್ಲಿ ಸಂಗ್ರಹಿಸಿ ಮರುಬಳಕೆದಾರರಿಗೆ ಮಾರಾಟ ಮಾಡಿ ಕಳೆದ ಒಂದು ವರ್ಷದಿಂದ ಒಟ್ಟು ರೂ.1,36,000/-ಗಳನ್ನು ನಗರಸಭೆಗೆ ಪಾವತಿಸಿಕೊಳ್ಳಲಾಗಿರುತ್ತದೆ.

ನಗರಸಭೆ ವ್ಯಾಪ್ತಿಯಲ್ಲಿ ಸಂಜೆ ಸಮಯದಲ್ಲಿ ಮಾಂಸ ತ್ಯಾಜ್ಯ ಮತ್ತು ರಸ್ತೆ ಬದಿ ವ್ಯಾಪಾರಸ್ಥರ ತ್ಯಾಜ್ಯವನ್ನು ಸಂಗ್ರಹಿಸಲು ಪ್ರತ್ಯೇಕವಾಗಿ ವಾಹನಗಳನ್ನು ನಿಯೋಜಿಸಲಾಗಿರುತ್ತದೆ ಹಾಗೂ ಪ್ರಸ್ತುತ 18 ಕಮ್ಯೂನಿಟಿ ಮೊಬಲೈಜರ್ಸ್ ಗಳನ್ನು IEC ಕಾರ್ಯಕ್ರಮದಡಿ ನೇಮಕ ಮಾಡಿಕೊಂಡಿದ್ದು ಹಂತ ಹಂತವಾಗಿ ಮನೆ-ಮನೆಗೆ ಭೇಟಿ ನೀಡಿ ಮನೆಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಎಸೆಯದೇ ಹಸಿಕಸ ಮತ್ತು ಒಣಕಸವಾಗಿ  ವಿಂಗಡಿಸಿ ನಗರಸಭೆ ವಾಹನಗಳಿಗೆ ನೀಡುವಂತೆ ಸಾರ್ವಜನಿಕರಿಗೆ ಅರಿವು ಮೂಡಿಸಲಾಗುತ್ತಿದೆ.

ಸಾರ್ವಜನಿಕರು ಅನಧಿಕೃತವಾಗಿ ಹೆಚ್ಚು ತ್ಯಾಜ್ಯ ಸುರಿಯುತ್ತಿರುವ 20 ಸ್ಥಳಗಳನ್ನು (Black spot) ಗುರುತಿಸಿ ಅಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಿದ್ದು ಅದರ ಮೇಲ್ವಿಚಾರಣೆಯನ್ನು ಆಯಾ ವಾರ್ಡ್ ಸೂಪರ್‌ವೈಸರ್‌ಗಳಿಗೆ ನೀಡಿದ್ದು ಅನಧಿಕೃತವಾಗಿ ತ್ಯಾಜ್ಯ ಎಸೆಯುವವರನ್ನು ಗುರುತಿಸಿ ದಂಡ ವಿಧಿಸಲಾಗುತ್ತಿದ್ದು ಅಂತಹವರ ವಿರುದ್ಧ ಸ್ಥಳೀಯ ಪೋಲೀಸ್ ಸ್ಟೇಷನ್ ನಲ್ಲಿ ಮೊಕದ್ದಮೆಗಳನ್ನು ದಾಖಲಿಸಲು ಕ್ರಮ ವಹಿಸಲಾಗುತ್ತಿದೆ.

ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಈಗಾಗಲೇ ಶೇಖರಣೆಯಾಗಿರುವ ಪಾರಂಪರಿಕ ತ್ಯಾಜ್ಯವನ್ನು ಸಂಸ್ಕರಣೆ ಮಾಡಲು ನಿಯಮಾನುಸಾರ ಟೆಂಡರ್ ಕರೆದು ದಿನಾಂಕ: 04-04-2025 ರಂದು ಕಾರ್ಯಾದೇಶ ನೀಡಲಾಗಿದ್ದು ಸಂಸ್ಕರಣೆ ಕಾರ್ಯ ಪ್ರಗತಿ ಹಂತದಲ್ಲಿರುತ್ತದೆ.

(ಕಡತ ಸಂಖ್ಯೆ: ನಅಇ 186 ಸಿಎಸ್‌ಎಸ್ 2025)

**(ರಹೀಂ ಖಾನ್)**
ಪೌರಾಡಳಿತ ಹಾಗೂ ಹಜ್ ಸಚಿವರು